ಮಾದರಿ ಪ್ರಶ್ನೆ ಪತ್ರಿಕೆ ೫

ಪ್ರಥಮ ಭಾಷೆ ಕನ್ನಡ        ೧೦ ನೇ ತರಗತಿ

ಗರಿಷ್ಠ ಅಂಕ: ೧೦೦                    ಅವಧಿ : 2.45  ಗಂಟೆಗಳು

ಭಾಗ -'ಎ'

ಪಠ್ಯಗಳ ಅಧ್ಯಯನ (ಗದ್ಯ , ಪದ್ಯ, ಪೋಷಕ ಅಧ್ಯಯನ )೬೭ ಅಂಕಗಳು

## ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೧೧*೧

೧. ಅಮೆರಿಕ ಕೆನಡಾ ದೇಶಗಳಲ್ಲಿ ಮನೆಗಳನ್ನು ಯಾವುದರಿಂದ ಕಟ್ಟುತ್ತಾರೆ ?

೨. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು ?

೩. ಮಲೆಗಳಲ್ಲಿ ಮದುಮಗಳು ಕೃತಿಯನ್ನು ಬರೆದವರು ಯಾರು ?

೪.ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

೫.ಶಾನುಭೋಗರು ಹೇಗೆ ಜೀವನ ನಡೆಸುತ್ತಿದ್ದರು ?

೬.ಯಾರು ಯಾರಿಂದಲೂ ಅರ್ಜುನನನ್ನು ಎದುರಿಸಲು ಸಾಧ್ಯವಾಗಲಿಲ್ಲ ?

೭.ಕುಂಪಣಿ ಸರಕಾರದ ಯಾವ ಆದೇಶವನ್ನು ಹಲಗಲಿ ಬೇಡರು ವಿರೋಧಿಸಿದರು ?

೮.ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?

೯ ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?

೧೦.ಅನ್ ಟು ದಿಸ್ ಲಾಸ್ಟ್ ಕೃತಿಯನ್ನು ಗಾಂಧೀಜಿಯವರು ಗುಜರಾತಿ ಭಾಷೆಗೆ ಯಾವ ಹೆಸರಿನಿಂದ ಅನುವಾದಿಸಿದ್ದಾರೆ ?

೧೧.ಪಾರಿವಾಳಗಳು ಏಕೆ ಆನಂದ ಹೊಂದಿದವು ?

## ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧೨.ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?

೧೩.ಕೈಗಾರಿಕಾ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯನವರು ನೀಡಿದ ಕೊಡುಗೆಗಳು ಯಾವುವು ?

೧೪.ವಿಶ್ವೇಶ್ವರಯ್ಯನವರು ಎಂಜನಿಯರುಗಳಿಗೆ ಹೇಗೆ ಮಾರ್ಗದರ್ಶನ ಮಾಡಿದರು ?

೧೫.ಇಂದಲ್ಲ ನಾಳೆ ಫಲಕೊಡುವ ಅಂಶಗಳು ಯಾವುವು ?ಹೇಗೆ ವಿವರಿಸಿ .

೧೬.ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?

mamatabhagwat1@gmail.com

೧೭.ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆ ತಿಳಿಸಿ.

೧೮.ಯಜ್ಞಾಶ್ವದ ಹಣೆಪಟ್ಟಿಯಲ್ಲಿದ್ದ ಬರಹವನ್ನು ನೋಡಿ ಲವನು ಏನೆಂದು ಯೋಚಿಸಿದನು ?

೧೯.ಸಮಾಜಸುಧಾರಣೆ ಯಾವಾಗ ಸಾಧ್ಯವೆಂದು ಎಚ್ ನರಸಿಂಹಯ್ಯನವರ ಅಭಿಪ್ರಾಯವಾಗಿದೆ

೨೦.ಒಗಟುಗಳ ವೈಶಿಷ್ಟ್ಯ ತಿಳಿಸಿ .

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೬**

೨೧. ''ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ ''

೨೨.'' ಹುಸಿಯದ ಬೇಹಾರಿಯೇ ಇಲ್ಲ ''

೨೩. ''ಪೆರ್ಮರನುಳಿವಂತೆ ನೀನುಳಿದೆ''

೨೪. ನಾಳಿನ ಕನಸನು ಬಿತ್ತೋಣ ''

**ಈ ಸಾಹಿತಿಗಳ ಸ್ಥಳ ,ಕಾಲ, ಕೃತಿಗಳನ್ನು ಕುರಿತು ಬರೆಯಿರಿ. ೨*೩=೬**

೨೫. ಎ.ಎನ್ .ಮೂರ್ತಿರಾವ್

೨೬ .ದು.ಸರಸ್ವತಿ

**೨೭.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ೧*೪=೪**

ನುಡಿದರೆ ----------

--------------------------

----------------------

---------------------

--------------------- ನೆಂತೊಲಿವನಯ್ಯ ?

ಅಥವಾ

ನಿಷ್ಠೆಯುಳ್ಳ -------

-------------------

---------------------

----------------ರಾಮನಾಥ

mamatabhagwat1@gmail.com

೨೮.ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೪*೧=೪

ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ.
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ
ಪ್ರಶ್ನೆಗಳು
೧.ಈ ನುಡಿಯಲ್ಲಿ ಎಲ್ಲರೂ ಮೆಚ್ಚಬಹುದಾದ ಕರ್ಣನ ಉದಾತ್ತ ಗುಣ ಯಾವುದು ?
೨. ಯಾವುದರಲ್ಲಿ ತನಗೆ ಮನವಿಲ್ಲ ಎಂದು ಕರ್ಣ ಹೇಳಿದ್ದಾನೆ ?
೩.ಕರ್ಣನು ಯಾವ ಭರದಲ್ಲಿದ್ದನು ?
೪.ಯಾರನ್ನು ಕೃಷ್ಣನು ಕೊಂದನು ಎಂದು ಕರ್ಣ ಹೇಳುವನು ?

ಭಾಗ – 'ಬಿ'
ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮

೨೯.ರಾಮನ ಬರುವಿಕೆಗೆ ಶಬರಿಯು ಮಾಡಿದ ಸಿದ್ಧತೆ ಮತ್ತು ರಾಮನ ಕುರಿತಾದ ಅವಳ ಭಾವವು ಶಬರಿಯ ಹಾಡಿನಲ್ಲಿ ವ್ಯಕ್ತವಾದ ರೀತಿ ವರ್ಣಿಸಿ
ಅಥವಾ
ಶಬರಿಗೆ ರಾಮನು ಮೋಕ್ಷ ಕರುಣಿಸಿದ ಸಂದರ್ಭ ವರ್ಣಿಸಿ.

೩೦.ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳು ಯಾವುವು ?
ಅಥವಾ
ಕಾಲದ ಹಕ್ಕಿಯ ಮುಂದೆ ಎಲ್ಲರೂ ಸಮಾನರು ಈ ಹೇಳಿಕೆಯನ್ನು ವಿಶ್ಲೇಷಿಸಿ.

mamatabhagwat1@gmail.com

೩೧. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.. ೪=೨+೨

ಎಲ್ಲ ಧರ್ಮಗಳೂ ಹಾಕಿಕೊಟ್ಟ ಒಂದು ರತ್ನಪಾಠವಿದೆ.ಸಾಧಕನಿಗೆ ,ಅಂತರ್ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಎಲ್ಲ ಧರ್ಮಗಳೂ ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಹೇಳಿವೆ.ಧರ್ಮಶಾಲೆಗಳು ,ವಿಹಾರಗಳು ,ಅನ್ನ ಛತ್ರಗಳು -ಇವು ಏರ್ಪಟ್ಟಿರುವುದು ಇಂಥವರಿಗಾಗಿ ಹಾಗೂ ನಿರ್ಗತಿಕರಿಗಾಗಿ .ಅನೇಕ ದೇವಸ್ಥಾನಗಳಲ್ಲಿಯೂ ,ಮಠಗಳಲ್ಲಿಯೂ ಇಂಥ ಏರ್ಪಾಟಿದೆ.ಇಂಥ ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಂಡವರೂ ಉಂಟು .ಇದು ಸಮಾಜದ ಕರ್ತವ್ಯವಾಯಿತು .ಆದರೆ ಸಾಧಕನ ಕರ್ತವ್ಯವೇನು ?ಇನ್ನೊಬ್ಬರ ಮೇಲೆ ಅವನೊಂದಿಗೂ ಭಾರ ಹಾಕಿರಬಾರದು .ಇನ್ನೊಬ್ಬರು ತಾವಾಗಿಯೇ ಕೈಯೆತ್ತಿಕೊಡದೆ ಅವನು ಏನನ್ನೂ ಸ್ವೀಕರಿಸಬಾರದು .ದಾತೃವಿನ ಮನವನ್ನು ಹತ್ತುಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು.ಕೇಳಿ ದೊರಕಿಸಿಕೊಂಡ ಸಾಮಗ್ರಿ -ಸೌಕರ್ಯಗಳ ಮೇಲೆ ನಿಂತ ಸಾಧನೆ -ತಪಸ್ಸು, ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ ಅದಕ್ಕೆ ಸ್ವಯಂ ಪೂರ್ಣತೆ ಇಲ್ಲ .

ಪ್ರಶ್ನೆಗಳು :

೧.ಧರ್ಮಗಳು ಹಾಕಿಕೊಟ್ಟ ರತ್ನಪಾಠವನ್ನು ಸಮಾಜ ಹೇಗೆ ನಿರ್ವಹಿಸುತ್ತದೆ ?

೨.ಸಾಧಕನ ಕರ್ತವ್ಯವೇನು ?

ಭಾಗ – 'ಬಿ'

ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು -೨೦ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಉತ್ತರದ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ ೧೦*೧=೧೦

೩೨. 'ಸುತ್ತಮುತ್ತ ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.....

ಎ) ಜೋಡುನುಡಿ ಬಿ)ಅನುಕರಣಾವ್ಯಯ ಸಿ)ನುಡಿಗಟ್ಟು ಡಿ)ದ್ವಿರುಕ್ತಿ

೩೩. ಹೊತ್ತಿಕೊಂಡೀತು  ಪದವು ಕ್ರಿಯಾಪದದ ಈ ರೂಪಕ್ಕೆ ಉದಾಹರಣೆಯಾಗಿದೆ ---

ಎ) ನಿಷೇಧಾರ್ಥಕ      ಬಿ)ಸಾಮಾನ್ಯಾರ್ಥಕ     ಸಿ)ವಿಧ್ಯರ್ಥಕ    ಡಿ)ಸಂಭಾವನಾರ್ಥಕ

೩೪. 'ಕೊಯ್ ' ಪದದಲ್ಲಿರುವ ವ್ಯಾಕರಣ ವಿಶೇಷವಿದು -----

ಎ)ನುಡಿಗಟ್ಟು   ಬಿ)ದ್ವಿರುಕ್ತಿ    ಸಿ)ಅನುಕರಣಾವ್ಯಯ    ಡಿ)ಜೋಡುನುಡಿ

೩೫. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು .-----

ಎ) ಪ್ರಶ್ನಾರ್ಥಕ     ಬಿ)ಅಲ್ಪವಿರಾಮ    ಸಿ)ಅರ್ಧವಿರಾಮ     ಡಿ)ಉದ್ಧರಣ

೩೬. 'ಕುಲಧರ್ಮ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ ----

ಎ)ಗಮಕ ಸಮಾಸ    ಬಿ)ತತ್ಪುರುಷ ಸಮಾಸ   ಸಿ)ದ್ವಿಗು ಸಮಾಸ    ಡಿ)ಕ್ರಿಯಾ ಸಮಾಸ

೩೮.ತಾವು ಕಡಿಮೆ ಮಾತನಾಡಿದ್ದೀರಿ; ಆದರೆ ಹೆಚ್ಚು ಕೆಲಸ ಮಾಡಿದ್ದೀರಿ . ಈ ವಾಕ್ಯವು ವಾಕ್ಯದ ಈ ಪ್ರಕಾರಕ್ಕೆ ಸೇರಿದೆ.

ಎ) ಸಾಮಾನ್ಯ ವಾಕ್ಯ     ಬಿ)ನಿಷೇಧಾರ್ಥಕ ವಾಕ್ಯ     ಸಿ )ಮಿಶ್ರವಾಕ್ಯ   ಡಿ)ಸಂಯೋಜಿತ ವಾಕ್ಯ

೩೯. ಚಂದ್ರಾರ್ಕ ಪದವು ಈ ಸಂಧಿಗೆ ಉದಾಹರಣೆಯಾಗಿದೆ -----

ಎ)ಗುಣ ಸಂಧಿ     ಬಿ)ಆದೇಶ ಸಂಧಿ     ಸಿ)ಸವರ್ಣದೀರ್ಘ      ಡಿ) ಲೋಪಸಂಧಿ

೪೦. ಇಳೆಯಂ  ಪದದಲ್ಲಿರುವ ವಿಭಕ್ತಿ ಯಿದು -----

ಎ) ತೃತೀಯಾ    ಬಿ)ಪ್ರಥಮಾ     ಸಿ)ದ್ವಿತೀಯಾ    ಡಿ)ಚತುರ್ಥಿ

೪೧.'ದಿನದಿನ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ .

ಎ)ದ್ವಿರುಕ್ತಿ    ಬಿ)ನುಡಿಗಟ್ಟು     ಸಿ)ಅನುಕರಣಾವ್ಯಯ     ಡಿ)ಜೋಡುನುಡಿ

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ  ಹೊಂದುವ ಸಂಬಂಧಿ  ಪದವನ್ನು ಬರೆಯಿರಿ.೪*೧=೪

೪೨. ಹಿಂಗ : ಹೀಗೆ : : ಮ್ಯಾಗ : ---

೪೩. ಸೊಣಗ : ಶುನಕ : : ಅಡವಿ : -----

೪೪. ಇಲಾಖೆ : ಉರ್ದು : : ಆಸ್ಪತ್ರೆ: ----

mamatabhagwat1@gmail.com

೪೫. ಬೇಗನೆ : ಸಾಮಾನ್ಯಾರ್ಥಕಾವ್ಯಯ : : ಅಥವಾ : -----

೪೬. ಈ ಕೆಳಗಿನ ಪದ್ಯಭಾಗಕ್ಕೆಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.೧*೩=೩

ಎಡದ ಮೈಯಲಿ ಕೌರವೇಂದ್ರರ
ಗಡಣ ಬಲದಲಿ ಪಾಂಡು ತನಯರ
ಗಡಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು
ಅಥವಾ
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು

೪೭.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ ಸಮನ್ವಯಿಸಿ.೧*೩
'ಶಿಕ್ಷಣವು ಸಂಜೀವಿನಿ'
ಅಥವಾ
'ವದನಾರವಿಂದ '

ಭಾಗ -'ಸಿ'
ವಾಕ್ಯರಚನೆ ಹಾಗೂ ಬರವಣಿಗೆ ಕೌಶಲ ೧೩ ಅಂಕಗಳು.
೪೮. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.
೧*೩=೩
* ಹೆತ್ತ ತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು
* ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ
* ಕೈ ಕೆಸರಾದರೆ ಬಾಯಿ ಮೊಸರು

mamatabhagwat1@gmail.com

೪೯. ನಿಮ್ಮ ಶಾಲೆಯಲ್ಲಿ ಆಚರಿಸಿದ ಪರಿಸರ ದಿನಾಚರಣೆಯ ಕುರಿತು ಧಾರವಾಡದ ವಿದ್ಯಾನಗರದ ನಿವಾಸಿಯಾದ ನಿಮ್ಮ ಗೆಳೆಯ/ಗೆಳತಿ ( ತೇಜಸ್/ ತನ್ಮಯಿ) ಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮ ಊರಿನಲ್ಲಿ ನಡೆಯುವ ಜಾತ್ರೆಗೆ ಹೋಗುವ ಸಲುವಾಗಿ ಎರಡು ದಿನಗಳ ರಜಾ ನೀಡುವಂತೆ ಕೋರಿ ನಿಮ್ಮ ವರ್ಗದ ಶಿಕ್ಷಕರಿಗೆ ರಜಾ ಅರ್ಜಿ ಬರೆಯಿರಿ.

೫೦. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.೧*೫=೫

೧. ರಾಷ್ಟ್ರೀಯ ಹಬ್ಬಗಳು

೨. ಪರಿಸರ ಮಾಲಿನ್ಯ

೩. ದೂರದರ್ಶನದ ಉಪಯೋಗ ಮತ್ತು ಹಾನಿಗಳು

mamatabhagwat1@gmail.com